# ಭಗವಂತನ ಮಾಯೆ



❋ ಭಕ್ತ : ''ಭಗವಂತ ದುಷ್ಟರನ್ನೇಕೆ ಸೃಷ್ಟಿ ಮಾಡಿದ?''

ಶ್ರೀರಾಮಕೃಷ್ಣರು: ''ಆತನ ಇಚ್ಛೆ, ಆತನ ಲೀಲೆ. ಆತನ ಮಾಯೆಯಲ್ಲಿ ವಿದ್ಯೆಯೂ ಇದೆ. ಅಂಧಕಾರದ ಆವಶ್ಯಕತೆಯೂ ಇದೆ. ಅದು ಬೆಳಕಿನ ಮಹತ್ತನ್ನು ಇನ್ನೂ ಹೆಚ್ಚಾಗಿ ಪ್ರಕಾಶಗೊಳಿಸುತ್ತದೆ. ಕಾಮ, ಕ್ರೋಧ, ಲೋಭ ಇವು ಕೆಟ್ಟವೇನೋ ನಿಜ. ಹಾಗಾದರೆ ಅವನ್ನು ಏಕೆ ಸೃಷ್ಟಿಸಿದ್ದಾನೆ ಅಂತೀಯೊ? ಮಹಾಪುರುಷರನ್ನಾಗಿ ತಯಾರು ಮಾಡಲು. ಇಂದ್ರಿಯಗಳನ್ನು ಗೆದ್ದರೆ ಮನುಷ್ಯ ಮಹಾ ಪುರುಷನಾಗುತ್ತಾನೆ. ಜಿತೇಂದ್ರಿಯನ ಕೈಯಲ್ಲಿ ಏನು ತಾನೆ ಸಾಧ್ಯವಿಲ್ಲ? ಭಗವಂತನ ಸಾಕ್ಷಾತ್ಕಾರವೂ ಆತನ ಕೃಪೆಯಿಂದ ದೊರೆತುಬಿಡುತ್ತದೆ. ಮತ್ತೆ ಬೇರೆ ದೃಷ್ಟಿಯಿಂದ ನೋಡು. ಕಾಮದಿಂದಲೇ ಆತನ ಸೃಷ್ಟಿ-ಲೀಲೆ ಮುಂದುವರಿಯುತ್ತದೆ.''

❋ ದುಷ್ಟರ ಆವಶ್ಯಕತೆಯೂ ಇದೆ. ಒಮ್ಮೆ ಒಂದು ಎಸ್ಟೇಟಿನ ಜನರು ಪುಂಡೆದ್ದರು. ಜಮೀನುದಾರ ಗೋಲೋಕ ಚೌಧುರಿಯನ್ನು ಅಲ್ಲಿಗೆ ಕಳುಹಿಸಬೇಕಾಯಿತು. ಆತ ಅಂಥಾ ನಿರ್ದಯಿ, ಆತನ ಹೆಸರು ಕೇಳಿಯೇ ಜನರು 'ಥರಥರ' ನಡುಗಲಾರಂಭಿಸಿದರು.

❋ ಪ್ರತಿಯೊಂದರ ಆವಶ್ಯಕತೆಯೂ ಇದೆ. ಒಮ್ಮೆ ಸೀತೆ ರಾಮನಿಗೆ ಹೇಳಿದಳು: 'ರಾಮ, ಅಯೋಧ್ಯೆಯಲ್ಲಿನ ಪ್ರತಿಯೊಂದು ಮನೆಯೂ ಅರಮನೆಯಂತಿದ್ದರೆ ಚೆನ್ನಾಗಿರುತ್ತದೆ! ಅನೇಕ ಮನೆ ನೋಡುತ್ತೇನೆ. ಹರಕಲು-ಮುರುಕಲು, ಬಹಳ ಹಳೆಯವು.'

ರಾಮ ಹೇಳಿದ: 'ಸೀತೆ, ಎಲ್ಲಾ ಮನೆಗಳೂ ಸುಂದರವಾದುವೇ ಆಗಿಬಿಟ್ಟರೆ, ಮೇಸ್ತ್ರಿಗಳ ಗತಿ?' (ನಗು). ಭಗವಂತ ಎಲ್ಲಾ ರಕಮುವಾರಿ ಸೃಷ್ಟಿಸಿದ್ದಾನೆ — ಒಳ್ಳೆಯ ಮರ, ವಿಷದ ಗಿಡ, ಜೊತೆಗೆ ಜೊಂಡು ಕೂಡ. ಪ್ರಾಣಿಗಳಲ್ಲಿಯೂ ಒಳ್ಳೆಯದು ಕೆಟ್ಟದು ಎಲ್ಲಾ ಇವೆ - ಹುಲಿ, ಸಿಂಹ, ಹಾವು ಎಲ್ಲಾ.

*(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೨೬)*

❋ ಬ್ರಹ್ಮ ವಿದ್ಯೆ-ಅವಿದ್ಯೆಗಳಿಗೆ ಅತೀತ. ಆತ ಮಾಯಾತೀತ. ಈ ಜಗತ್ತಿನಲ್ಲಿ ವಿದ್ಯಾಮಾಯೆ, ಅವಿದ್ಯಾಮಾಯೆ ಎರಡೂ ಇವೆ. ಜ್ಞಾನಭಕ್ತಿಯೂ ಇವೆ, ಕಾಮಕಾಂಚನವೂ ಇವೆ; ಸತ್ ಕೂಡಾ ಇದೆ, ಅಸತ್ ಕೂಡಾ ಇದೆ; ಒಳ್ಳೆಯದೂ ಇದೆ, ಕೆಟ್ಟದ್ದೂ ಇದೆ. ಆದರೆ ಬ್ರಹ್ಮ ಮಾತ್ರ ನಿರ್ಲಿಪ್ತ. ಒಳ್ಳೆಯದು-ಕೆಟ್ಟದ್ದು, ಸತ್-ಅಸತ್ ಇವು ಜೀವಿಗಳ ಪಕ್ಷಕ್ಕೆ ಮಾತ್ರ; ಆದರೆ ಬ್ರಹ್ಮನಿಗೆ ಅವುಗಳಿಂದ ಏನೂ ಆಗದು.

❋ ಒಬ್ಬ ದೀಪದ ಬೆಳಕಿನಲ್ಲಿ ಭಾಗವತ ಓದುತ್ತಿರಬಹುದು, ಇನ್ನೊಬ್ಬ ಅದೇ ಬೆಳಕಿನಲ್ಲಿ ಸುಳ್ಳು ಪತ್ರ ಬರೆಯುತ್ತಿರಬಹುದು; ಆದರೆ ದೀಪ ಮಾತ್ರ ನಿರ್ಲಿಪ್ತವಾದ್ದು. ಸೂರ್ಯ ತನ್ನ ಬೆಳಕನ್ನು ಒಳ್ಳೆಯವರ ಮೇಲೂ ಬಿಡುತ್ತಾನೆ, ಕೆಟ್ಟವರ ಮೇಲೂ ಬಿಡುತ್ತಾನೆ.

❋ ನೀನು ಕೇಳಬಹುದು: 'ಹಾಗಾದರೆ ದುಃಖ, ಪಾಪ, ಅಶಾಂತಿ ಇವುಗಳಿಗೆಲ್ಲ ಸಮಂಜಸ ಉತ್ತರ ಎಲ್ಲಿ?' ಇವೆಲ್ಲ ಜೀವಕ್ಕೆ ಸಂಬಂಧಪಟ್ಟವು ಎಂಬುದೇ ಉತ್ತರ. ಬ್ರಹ್ಮ ಇವುಗಳಿಂದ ನಿರ್ಲಿಪ್ತ. ಹಾವಿನಲ್ಲಿ ವಿಷವಿದೆ, ಅದು ಪರರನ್ನು ಕಡಿದಾಗ ಮಾತ್ರ ಅವರು ಸತ್ತುಹೋಗುತ್ತಾರೆ. ಆದರೆ ಹಾವಿಗೆ ಮಾತ್ರ ಅದರಿಂದ ಏನೂ ಆಗದು.

*(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೩೨)*

❋ ಭಕ್ತ : ''ಮಹಾಶಯರೆ, ಇಚ್ಛೆಪಟ್ಟರೆ ಆಕೆ ಎಲ್ಲರನ್ನೂ ಮುಕ್ತರನ್ನಾಗಿ ಮಾಡಿಬಿಡಬಲ್ಲಳು. ಹಾಗಿರುವಾಗ ನಮ್ಮನ್ನೇಕೆ ಸಂಸಾರದಲ್ಲಿ ಬಂಧಿಸಿ ಇಟ್ಟಿದ್ದಾಳೆ ?''

ಶ್ರೀರಾಮಕೃಷ್ಣರು: ''ಆಕೆಯ ಇಚ್ಛೆ. ತಾನು ಸೃಷ್ಟಿಸಿದ ವಸ್ತುಗಳೊಡನೆ ತಾನು ಆಟವಾಡುತ್ತಲೇ ಇರಬೇಕು ಅಂತ ಆಕೆಯ ಇಚ್ಛೆ. ಕಣ್ಣುಮುಚ್ಚಾಲೆ ಆಟದಲ್ಲಿ ಯಾರುಹೋಗಿ ಅಜ್ಜಿಯನ್ನು ಮುಟ್ಟಿಬಿಡುತ್ತಾರೊ, ಅವರು ಅನಂತರ ಓಡಾಡಬೇಕಾಗಿರುವುದಿಲ್ಲ. ಎಲ್ಲರೂ ಹೋಗಿ ಅಜ್ಜಿಯನ್ನು ಮುಟ್ಟಿಬಿಟ್ಟರೆ ಆಟ ಹೇಗೆ ಮುಂದುವರಿಯಬೇಕು? ಅದು ಆಕೆಗೆ ಅಸಂತೋಷವನ್ನುಂಟು ಮಾಡುತ್ತದೆ. *(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೭೪-೭೬)*

❋ ಏಕೆ ಭಗವಂತ ನಮ್ಮನ್ನು ಸಂಸಾರದಿಂದ ಬಿಡುಗಡೆ ಮಾಡುತ್ತಿಲ್ಲ ಗೊತ್ತೆ? ರೋಗ ಗುಣ ಆಗಬೇಕು, ಬಳಿಕ ಬಿಡುಗಡೆ. ಕಾಮಕಾಂಚನವನ್ನು ಭೋಗಿಸಬೇಕೆಂಬ ಇಚ್ಛೆ ಹೊರಟು ಹೋದೊಡನೆಯೆ ನಮ್ಮನ್ನು ಬಿಡುಗಡೆ ಮಾಡಿಬಿಡುತ್ತಾನೆ. ಒಮ್ಮೆ ಹೋಗಿ ಆಸ್ಪತ್ರೆಗೆ ದಾಖಲಾದ ಎಂದರೆ ಮತ್ತೆ ಓಡಿ ಬರಲಾಗುವುದಿಲ್ಲ. ರೋಗದ ಕೊಸರು ಸ್ವಲ್ಪ ಇದ್ದರೂ ಡಾಕ್ಟರು ಬಿಟ್ಟುಕೊಡುವುದಿಲ್ಲ.

*(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೧೩೯)*

ಶ್ರೀರಾಮಕೃಷ್ಣ ವಚನವೇದದಿಂದ